ಕಥೆ




ಮಲಯಾಳಂ ಮೂಲ: **ಜೇಕಬ್ ಅಬ್ರಹಾಂ**
ಕನ್ನಡಕ್ಕೆ: **ಕೆ.ಕೆ. ಗಂಗಾಧರನ್**
ಕಲೆ: ಸೃಜನ್



# ಆಥರ್ಸ್ ಕಾಪಿ

ಪೋಥಿಸ್‌ನ ಮುಂದೆ ನಾನು ಪ್ರಿಯಾಳನ್ನು ಕಾಯುತ್ತಾ ನಿಂತಿದ್ದೆ. ಬಟ್ಟೆಯಂಗಡಿಯಲ್ಲಿ ಗ್ರಾಹಕರು ತುಂಬಿದ್ದರು. ಹಸಿರು ಸೀರೆ ಕೆಂಪು ರವಿಕೆಯನ್ನು ತೊಟ್ಟ ಸೇಲ್ಸ್ ಗರ್ಲ್ಸ್‌ನ ಗುಂಪು ಫ್ಲೋರಿನಲ್ಲಿ ಅತ್ತಿಂದಿತ್ತ ಓಡಾಡುತ್ತಿತ್ತು.

ಇಬ್ಬರು ಸಹೋದ್ಯೋಗಿಗಳೊಂದಿಗೆ ಪ್ರಿಯಾ ಹೊರ ಬಂದಳು. ಅವರಿಬ್ಬರೂ ತಮಿಳು ಮಹಿಳೆಯರು. ಕನಕವಲ್ಲಿ ಮತ್ತು ಮೈಥಿಲಿ. ಹೆಣ್ಮಕ್ಕಳು ನನ್ನನ್ನು ನೋಡಿ ಮಂದಹಾಸ ಚೆಲ್ಲಿದರು. ನಾನೂ ನಕ್ಕೆ.

'ನೋಡಿದ್ರೆ ಒಬ್ಬ ಲೇಖಕನಂತಿದ್ದಾರೆಂದು ನಿಮ್ಮನ್ನು ನೋಡಿ ಅವರು ಹೇಳುತ್ತಿದ್ದದ್ದನ್ನು ಕೇಳಿಸಿಕೊಂಡಿರಾ? ನಿಮ್ಮ ಕನ್ನಡಕ ಮುಖದ ಮೇಲಿನ ಕುರುಚಲು ಗಡ್ಡ....' ಎನ್ನುತ್ತಾ ಪ್ರಿಯಾ ಬೈಕಿನ ಹಿಂದೆ ಕುಳಿತುಕೊಂಡಳು. ನಗರ ನಿಧಾನವಾಗಿ ರಾತ್ರಿಯ ಮುಖವಾಡವನ್ನು ಕಿತ್ತೆಸೆಯಲು ಸಜ್ಜಾಗುತ್ತಿತ್ತು. ಅಂದು ಕೂಡ ಒಂದು ಮಾಮೂಲಿ ಕೆಲಸದ ದಿನ. ಮನೆಗೆ ಬಂದ ಕೂಡಲೇ ಕಾಫಿ. ರಾತ್ರಿ ಊಟ. ಮತ್ತೆ ನಿದ್ರೆ!

'ಮನೋಜ್, ನೀವು ಬರೆದ ಕಥೆಯನ್ನೆಲ್ಲ ಒಟ್ಟು ಮಾಡಿ ನಮಗೊಂದು ಕಥಾ ಸಂಗ್ರಹ ತಂದರೆ ಹೇಗೆ ?'

ನನ್ನ ಎದೆಯ ಮೇಲೆ ತಲೆಯನ್ನಿಟ್ಟು ಪ್ರಿಯಾ ಪಿಸುಗುಟ್ಟಿದಳು. ಕಿಟಕಿಯಿಂದ ತೂರಿದ ಬೆಳದಿಂಗಳ ಒಂದು ಹನಿ ನೆಲಕ್ಕೆ ಬಿದ್ದಿತ್ತು. ನಾನು ಪ್ರಿಯಾಳನ್ನು ಮತ್ತಷ್ಟು ಹತ್ತಿರಕ್ಕೆಳೆದು ಮಲಗಿದೆ. ಕಾಯಿಸದೆಣ್ಣೆಯ ಸುವಾಸನೆ ಚಂದ್ರಿಕಾ ಸೋಪಿನ ಪರಿಮಳ ಮೂಗಿನೊಳಕ್ಕೆಳೆದು ಉಸಿರು ಚೆಲ್ಲಿದೆ.

'ರೀ ನೀವು ಎಷ್ಟು ದಿನಗಳಿಂದ ಕಥೆ ಬರೆಯುತ್ತಿದ್ದೀರಿ. ಒಂದು ಪುಸ್ತಕವಾದರೂ ಬಂದಿದೆಯಾ ಹೇಳಿ? ನಿಮಗೆ ಪುಸ್ತಕ ಬರಬೇಕೂಂತ ಆಸೆ ಇಲ್ಲವೇನು?'

ನಾನು ಸುಮ್ಮನೆ ಊಂಗುಟ್ಟಿದೆ. ಆನಂತರ ಹೇಳಿದೆ.

'ಪುಸ್ತಕ ತರೊದು ಹುಡುಗಾಟವೇನು. ಖರ್ಚಿನ ಬಾಬತ್ತು ಪ್ರಿಯಾ...'